ವಿಶಾಖ ಎನ್.



# ‘ಚಂದ್ರಮುಖಿ2’ ಕೆಲಸ ಮುಗಿಸಿದ ಕಂಗನಾ

ಕಂಗನಾ ರನೋಟ್ ಅವರಿಗೂ ತಮಿಳು ಸಿನಿಮಾಗೂ ಸಂದ ಸಂಬಂಧವೊಂದು ಸೌಹಾರ್ದಯುತವಾಗಿ ಪೂರ್ಣಗೊಂಡಿದೆ.

ಕಂಗನಾ ಅವರಿಗೆ ದಕ್ಷಿಣ ಭಾರತದ ಚಲನಚಿತ್ರಗಳ ನಂಟು ಹೊಸತೇನಲ್ಲ. ಹಿಂದೆ ‘ಮಣಿಕರ್ಣಿಕಾ’ ಸಿನಿಮಾವನ್ನು ನಿರ್ದೇಶಿಸಲು ತೆಲುಗಿನಿಂದಲೇ ಕ್ರಿಸ್ ಜಗರ್ಲಮುಂದು ಅವರನ್ನು ಕರೆಸಲಾಗಿತ್ತು. ಆದರೆ, ಸಿನಿಮಾ ಮುಗಿಯುವಷ್ಟರಲ್ಲಿ ಅವರೊಟ್ಟಿಗೆ ತಕರಾರು ಉಂಟಾಗಿ, ಕೆಲವು ಭಾಗಗಳನ್ನು ಕಂಗನಾ ತಾವೇ ನಿರ್ದೇಶಿಸಿದ್ದರು. ಶೀರ್ಷಿಕೆ ಪಟ್ಟಿಯಲ್ಲೂ ನಿರ್ದೇಶನ ಎನ್ನುವ ಕಡೆ ತಮ್ಮ ಹೆಸರೇ ಮೊದಲು ಬರುವಂತೆ ಕರಾರನ್ನೂ ಹಾಕಿದ್ದರು. ಆ ಘಟನೆಯ ಕುರಿತು ಮನ ನೊಂದಿದ್ದರೂ ಕ್ರಿಸ್ ಏನನ್ನೂ ಹೇಳಿಕೊಂಡಿರಲಿಲ್ಲ.

ಈಗ ‘ಚಂದ್ರಮುಖಿ 2’ ಸಿನಿಮಾದಲ್ಲಿ ಕಂಗನಾ ಭಾಗದ ಚಿತ್ರೀಕರಣ ಸಾಂಗವಾಗಿ ಮುಗಿದಿದೆ. ಮಲೆಯಾಳದ ‘ಮಣಿಚಿತ್ರಕಥಾ’ ಸಿನಿಮಾವನ್ನು ಕನ್ನಡದಲ್ಲಿ ದ್ವಾರಕೀಶ್ ‘ಆಪ್ತಮಿತ್ರ’ ಹೆಸರಿನಲ್ಲಿ ನಿರ್ಮಿಸಿದ್ದು ನೆನಪಿರಬೇಕು. ಅದೇ ಆಮೇಲೆ ತಮಿಳಿನಲ್ಲಿ ‘ಚಂದ್ರಮುಖಿ’ ಆಗಿ ರೀಮೇಕ್ ಆಗಿತ್ತು. ಪಿ. ವಾಸು ಎರಡೂ ಭಾಷೆಗಳ ರೀಮೇಕ್ ಚಿತ್ರಗಳನ್ನು ನಿರ್ದೇಶಿಸಿದ್ದರು. ಅದರ ಮುಂದುವರಿದ ಭಾಗ ಈಗ ತಮಿಳಿನಲ್ಲಿ ಸಿದ್ಧವಾಗುತ್ತಿದೆ.

ರಾಘವ ಲಾರೆನ್ಸ್ ಈ ಸಿನಿಮಾದ ನಾಯಕ. ವಡಿವೇಲು, ರಾಧಿಕಾ ಶರತ್‌ಕುಮಾರ್ ಮೊದಲಾದವರು ತಾರಾಬಳಗದಲ್ಲಿ ಇದ್ದಾರೆ. ಅಂದುಕೊಂಡಂತೆ ಕಂಗನಾ ಚಿತ್ರೀಕರಣದ ಭಾಗವನ್ನು ಮುಗಿಸಿದ ಮೇಲೆ ನಿರ್ದೇಶಕ ಪಿ. ವಾಸು ಒಂದು ಸರ್‌ಪ್ರೈಸ್ ಪಾರ್ಟಿ ಕೊಟ್ಟರು. ಎರಡು ಕೇಕ್‌ಗಳನ್ನು ತರಿಸಿ ಕಂಗನಾ ಅವರಿಂದ ಕಟ್ ಮಾಡಿಸಿ, ಬಾಯಿ ಸಿಹಿ ಮಾಡಿ, ಬೀಳ್ಕೊಟ್ಟರು.

ಕಂಗನಾ ಆ ಖುಷಿಯಲ್ಲೇ ಎರಡೆರಡು ಟ್ವೀಟ್ ಮಾಡಿದರು. ರಾಘವ ಲಾರೆನ್ಸ್ ಸಹ ನರ್ತಕನಾಗಿ ಕೆಲಸ ಶುರುಮಾಡಿ, ಈಗ ದೊಡ್ಡ ಮಟ್ಟದ ಸ್ಟಾರ್ ಆಗಿ ಬೆಳೆದಿರುವುದನ್ನು ಶ್ಲಾಘಿಸಿದರು. ಈ ಸಿನಿಮಾ ಚಿತ್ರೀಕರಣ ಕೊಟ್ಟ ಅನುಭವ ಹಾಗೂ ನಿರ್ದೇಶಕರ ವೃತ್ತಿಪರತೆಯ ಕುರಿತೂ ಮೆಚ್ಚುಗೆ ಮಾತುಗಳಿದ್ದವು. ■

# ಸೋನು ಸೂಕ್ಷ್ಮ ಉತ್ತರ



ಸೋನು ಸೂದ್ ಕೋವಿಡ್ ಕಾಲದ ಹೀರೊ ಆಗಿ ಗುರುತಾದಷ್ಟು ನಟರಾಗಿ ಛಾಪು ಮೂಡಿಸಿಲ್ಲ. ಮನುಷ್ಯತ್ವದ ಪ್ರತಿನಿಧಿಯಂತೆ ಅವರು ಕೋವಿಡ್ ಕಾಲಘಟ್ಟದಲ್ಲಿ ಎದ್ದುಕಂಡಿದ್ದರು. ಸಹಾಯಹಸ್ತ ಬೇಡಿದ ಎಷ್ಟೋ ಜನರಿಗೆ ಅವರು ಕೈಚಾಚಿದ್ದರು. ಭಾಷೆ, ಗಡಿಗಳನ್ನು ಮೀರಿ ಅವರ ಕೆಲಸ ರುಜುವಾತಾಗಿತ್ತು.

ಇತ್ತೀಚೆಗೆ ಅವರಿಗೆ ಎರಡು ಪ್ರಶ್ನೆಗಳು ಎದುರಾದವು. ಒಂದು, ‘ಬಾಯ್ಕಾಟ್ ಟ್ರೆಂಡ್’ ಬಗೆಗೆ ಏನೆನ್ನಿಸುತ್ತದೆ ಎನ್ನುವುದು. ಮತ್ತೊಂದು, ಹಿಂದೂಗಳನ್ನು ಇತ್ತೀಚಿನ ಸಿನಿಮಾಗಳಲ್ಲಿ ಕೆಟ್ಟದಾಗಿ ಬಿಂಬಿಸಲಾಗುತ್ತಿದೆಯೇ ಎನ್ನುವುದು.

ಅವರು ಮೊದಲನೆಯ ಪ್ರಶ್ನೆಗೆ ವಿವರವಾಗಿಯೂ, ಎರಡನೆಯದಕ್ಕೆ ಮುಗುಮ್ಮಾಗಿಯೂ ಉತ್ತರಿಸಿದರು.

‘ಸಿನಿಮಾ ನೋಡಿ ಇಷ್ಟಪಡುವುದು, ಬಿಡುವುದು ಅವರವರ ಭಾವಕ್ಕೆ ಬಿಟ್ಟ ವಿಚಾರ. ಆದರೆ, ನೋಡದೆಯೇ ನೋಡಬೇಡಿ ಎಂದು ಅಪ್ಪಣೆ ಕೊಡಿಸುವ ಮನಃಸ್ಥಿತಿ ವಿಚಿತ್ರ. ಬಹುಶಃ ಜನರ ಯಾರದ್ದೋ ಪ್ರಭಾವಕ್ಕೆ ಒಳಗಾಗಿ ತಮಗೆ ಅರಿವೇ ಇಲ್ಲದಂತೆ ಇಂತಹ ಅಭಿಪ್ರಾಯ ತೇಲಿಬಿಡುತ್ತಾರೆ. ಇದರ ಪರಿಣಾಮ ಏನಾದೀತು ಎನ್ನುವ ವಿವೇಚನೆ ಇರುವುದಿಲ್ಲ. ಅಂಥವರನ್ನು ಸಮಾಲೋಚನೆಗೆ ಒಳಪಡಿಸಿದರೆ, ತಮ್ಮ ಅಭಿಪ್ರಾಯ ಹುರುಳಿಲ್ಲದ್ದು ಅಂತಲೂ ಅನಿಸಬಹುದು’ ಎಂದು ಸೋನು ಸೂದ್ ಹೇಳಿದರು.

ಸಿನಿಮಾಗಳಲ್ಲಿ ಕೆಲವು ಧರ್ಮಸೂಕ್ಷ್ಮ ಇರುತ್ತವೆ ಎಂದ ಅವರು, ‘ಮುಸ್ಲಿಮರನ್ನು ಕೆಟ್ಟದಾಗಿ ಚಿತ್ರಿಸಿದರೆ ಅದರಿಂದ ಅಲ್ಪಸಂಖ್ಯಾತ ಸಮುದಾಯ ಕೆರಳುವ ಸಾಧ್ಯತೆ ಇರುತ್ತದೆ. ಇದನ್ನು ಮನಗಂಡೇ ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಾರೆ. ಯಾವ ಧರ್ಮದ ಹೀಗಳಿಕೆಯೂ ಅನೇಕರ ಉದ್ದೇಶ ಆಗಿರುವುದಿಲ್ಲ’ ಎಂದು ಉತ್ತರಿಸಿದರು.

ಸಿನಿಮಾ ತಯಾರಕರೆಲ್ಲರಿಗೂ ತಮ್ಮ ಚಲನಚಿತ್ರ ‘ಶೋಲೆ’ ತರಹ ಹಿಟ್ ಆಗಬೇಕು ಎಂಬ ಬಯಕೆ ಇರುತ್ತದೆ. ಸಿನಿಮಾ ಆಗುವ ಮೊದಲು ಹಾಗೂ ಆದ ನಂತರದ ಉತ್ಪನ್ನಕ್ಕೆ ಅನೇಕ ಸಂದರ್ಭಗಳಲ್ಲಿ ವ್ಯತ್ಯಾಸ ಆಗುತ್ತದೆ ಎಂದು ಅನುಭವ ಹಂಚಿಕೊಂಡರು. ■